Rural Veterinary Dispensary at Ankasandra

283. **Sri T. Taregowda** (Kallambella).—Will the Minister of State for Animal Husbandry be pleased to state:—

(*a*) whether Government has received any representation by the Member, Legislative Assembly and V. P. of Ankasandra, Chelur Hobli (Gubbi Taluk) requesting sanction of a Rural Veterinary (R.V.D.) to this village;

(*b*) whether the V.P have provided their newly constructed V.P. Hall for the Dispensary and has also agreed to provide dwelling quarters to the doctor or stockman;

(*c*) whether the Gubbi Taluk Development Board has also agreed to provide the required financial assistance for sanction of an R.V.D. to Ankasandra village as per resolution of the Taluk Development Board, Gubbi; whether the V.P. of Ankasandra has also agreed to give its financial contribution for sanction of an R V.D. to this place;

(*d*) whether the Government is aware that it is a drought affected interior hilly area where there is urgent need of curative and preventive medical facilities to the cattle and sheep;

(*c*) the steps taken to sanction one R.V.D in Ankasandra Village and to make adequate provision in the budget of 1977-78 as assured by the then Minister for Veterinary Services and Animal Husbandry?

Sri B. G Banakar (Minister of State for Animal Husbandry).—

(*a*) Yes

Village Panchayat Ankasandra has requested for the sanction of a Rural Veterinary Dispensary.

(*b*) Yes

Regarding providing of quarters to the Doctors or Stockman, nothing has been stated by the Village Panchayat.

(*c*) Yes

(*d*) Yes

(*e*) The matter is under consideration.

ಶ್ರೀ ಟಿ. ತಾರೇಗೌಡ.—ಸ್ವಾಮಿ, ತಾವು "ಅ" ಪ್ರಶ್ನೆಗೆ ಉತ್ತರ ಕೊಡುತ್ತಾ "ವೈದ್ಯರ ಹಾಗೂ ಪಶುವರ್ಧಕರಿಗೆ ವಸತಿ ಗೃಹಗಳನ್ನು ಒದಗಿಸುವುದಾಗಿ ಗ್ರಾಮ ಪಂಚಾಯಿತಿಯವರು ಏನೂ ತಿಳಿಸಿಲ್ಲ" ವೆಂದು ಹೇಳಿದ್ದೀರಿ. ಗ್ರಾಮ ಪಂಚಾಯಿತಿಯವರು ಗ್ರಾಮದಲ್ಲಿದ್ದರೆ ಕಟ್ಟಡವನ್ನು ಕೊಡತ್ತೇವೆ ಅಲ್ಲಿಲ್ಲದಿದ್ದರೆ ಬೇರೆ ಕಡೆಯಾದರೂ ಕೊಡುತ್ತೇವೆಂದು ತಿಳಿಸಿದ್ದಾರೆ ಇದನ್ನು ಜಾಗ್ರತೆಯಾಗಿ ತಾವು ಮಂಜೂರು ಮಾಡುತ್ತೀರಾ ಸ್ವಾಮಿ?

† ಶ್ರೀ ಬಿ. ಡಿ. ಬಣಕಾರ್.– ಅದಷ್ಟು ಬೇಗ ಮಂಜೂರು ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

Repairs to Buildings for Primary Schools in Bijapur District.

295. **Sri M. M. Sajjan** (Muddebihal).– Will the Minister of State for Primary and Secondary Education be pleased to state:—

(*a*) the total mumber of buildings of primary schools in Bijapur District for which repairs are required;

(*b*) the number of representations requesting repairs to these schools are pending disoposal with the officers as on 10th October 1976;

(*c*) whether there is any proposal for delegating or authorising each Block Development Officer with the power for spending upto Rs. 2000 for such repairs?

Sri Mallikarjun Kharge (Minister of State for Primary and Secondary Education)—

(*a*) 498.

(*b*) Information not readily available.

(*c*) A proposal from the Deputy Commissioner, Dharwar, has been received requesting delegation of powers to the Block Development Officers to accord administrative approval to the extent of Rs. 1,000 This is under consideration.

ಶ್ರೀ ಎಂ. ಎಂ. ಸಜ್ಜನ್.–ಸ್ವಾಮಿ, ಪ್ರಾಥಮಿಕ ಶಾಲಾ ಕಟ್ಟಡಗಳನ್ನು ದುರಸ್ತಿ ಮಾಡಿಸಬೇಕಾದರೆ ಬೇಕಾಗುವ ಹಣವನ್ನು ಖರ್ಚು ಮಾಡುವುದಕ್ಕೆ ಡೆಪ್ಯುಟಿ ಕಮೀಷನರ್‌ಗೆ ಅಧಿಕಾರವನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ನಾನು ಹೇಳಬೇಕೆಂದರೆ ಹಿಂದೆ ಡೆಪ್ಯುಟಿ ಕಮಿಷನರ್‌ಗಳಿಗೆ ಇದ್ದ ಅಧಿಕಾರಗಳನ್ನು ತಾವು ಮೊಟಕು ಮಾಡಿದ್ದರಿಂದ ನಮ್ಮ ಕಡೆಗಳಲ್ಲಿ ಶೇಕಡ 80 ರಷ್ಟು ಸ್ಕೂಲು ಕಟ್ಟಡಗಳು ದುರಸ್ತಿಯಾಗದೆ ಹಾಗೆಯೇ ಇವೆ. ಇವು ಯಾವ ಗಳಿಗೆಯಲ್ಲಿ ಮಕ್ಕಳ ಮೇಲೆ ಕುಸಿದು ಬಿದ್ದು ಮಕ್ಕಳ ಪ್ರಾಣಕ್ಕೆ ಧಕ್ಕೆ ಬರುತ್ತವೋ ಗೊತ್ತಿಲ್ಲ. ಆದುದರಿಂದ ಈ ಸ್ಕೂಲ್ ಕಟ್ಟಡಗಳನ್ನು ದುರಸ್ತಿ ಮಾಡಿಸುವುದಕ್ಕೆ ಬೇಗನೆ ಕ್ರಮ ತೆಗೆದುಕೊಳ್ಳುತ್ತೀರಾ.

† ಶ್ರೀ ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಕ್ಷಮಿಸಬೇಕು. ಅಗ ನನ್ನಲ್ಲಿ ಇನ್‌ಫರ್ಮೇಷನ್ ಇರಲಿಲ್ಲ. ಈಗ ಅದು ಸಿಕ್ಕಿದೆ. ಅದು ಈ ರೀತಿ ಇದೆ. ಬಿ.ಡಿ.ಒ.ಗೆ 17, ಡಿ.ಸಿ.ಗೆ. 2, ಎ.ಇ.ಒ.ಗೆ. 1 ಪಿ.ಡಬ್ಲ್ಯು.ಡಿ.ಗೆ. 1, ಗೌರ್ನಮೆಂಟ್‌ಗೆ 1 ಈ ರೀತಿ 10ನೇ ಅಕ್ಟೋಬರ್ 1976ರಂದು ಇದ್ದುದು. ಇನ್ನೊಂದು ಏನೆಂದರೆ ತಾವು ಹೇಳಿದ ಪ್ರಕಾರ ಈಗಾಗಲೇ ಬಿಜಾಪುರ ಡಿಸ್ಟ್ರಿಕ್ಟ್‌ನಲ್ಲಿ 1 ಲ 25 ಸಾವಿರ ರೂಪಾಯಿಗಳನ್ನು ಡೆಪ್ಯುಟಿ ಕಮಿಷನರವರಿಗೆ ಸ್ಕೂಲ್ ಬಿಲ್ಡಿಂಗ್ಸ್ ರಿಪೇರಿ ಮಾಡಿಸುವುದಕೋಸ್ಕರ ಕೊಟ್ಟಿದ್ದೇವೆ. ಇದರಲ್ಲಿ ಅವರು ಎಲ್ಲೆಲ್ಲಿ ಶಾಲಾ ಕಟ್ಟಡಗಳನ್ನು ರಿಪೇರಿ ಮಾಡಿಸಬೇಕೋ ಅವನ್ನು ಬಿ.ಡಿ.ಒ. ಅವರನ್ನು